ದಿನಾಂಕ 07-01-2026 ರಂದು ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು ವಾದಿ ಪರ ಶ್ರೀ.ಪಿ ಎಸ್ ವಕೀಲರಿಂದಃ-

ಮಾಯಣ್ಣರವರ ಹೆಸರಿನಲ್ಲಿ ಇದ್ದ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಮಾಯಣ್ಣರವರ ಹೆಸರಿನಲ್ಲಿ ಇದ್ದ ಪಹಣಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ನನ್ನ ಅಣ್ಣನ ಹೆಸರಿಗೆ ಖಾತೆ ಆದ ಬಗ್ಗೆ ದಾಖಲೆಯನ್ನು ಹಾಜರುಪಡಿಸಿಲ್ಲ. ಸರ್ವೆ ನಂ 96/2, 97/7 ರ ಮೂಲ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ನಿಡಿ-1 ಕ್ರಯಪತ್ರದಲ್ಲಿ 2 ಸರ್ವೆ ನಂಬರ್ಗಳು ಚಕ್ಕುಬಂದಿ ಒಂದೇ ಎಂದು ಬರೆದಿದೆ. 1959 ರಲ್ಲಿ ಕೆಂಪೇಗೌಡರ ಮಗ ಮಾಯಣ್ಣರವರಿಂದ ಹುಚ್ಚೇಗೌಡರು ಖರೀದಿ ಮಾಡಿದ್ದರು ಎಂದರೆ ಗೊತ್ತಿಲ್ಲ. ಕೊಂಡುಕೊಂಡಾಗಿನಿಂದಲೂ ಹುಚ್ಚೇಗೌಡರ ಸ್ವಾಧೀನದಲ್ಲಿ ಇದ್ದರೂ ಎಂದರೆ ಸಾಕ್ಷಿ ನಾನೇ ಇದ್ದೇನೆಂದು ನುಡಿಯುತ್ತಾರೆ. ಸಾಕ್ಷಿಗೆ ಒಂದು ಪಹಣಿ ತೋರಿಸಿ ಸದರಿ ದಾಖಲೆ ಪ್ರಕಾರ 1974-79 ರವರೆಗೆ ಸರ್ಕಾರಿ ಪಡ ಎಂದು ಪಹಣಿಯಲ್ಲಿ ಬರುತ್ತಿದೆ ಎಂದರೆ ಸಾಕ್ಷಿ ಆ ದಾಖಲೆಯಲ್ಲಿ ಇದೆ ಎಂದು ನುಡಿಯುತ್ತಾರೆ ಅದನ್ನು ನಿಪಿ-19 ಮತ್ತು ನಿಪಿ-20 ಎಂದು ಗುರುತಿಸಲಾಯಿತು. ನಿಪಿ-19 ಮತ್ತು 20 ರಲ್ಲಿ ಸರ್ಕಾರಿ ಪಡ ಎಂದು ಇರುವುದನ್ನು ದುರುಪಯೋಗ ಪಡಿಸಿಕೊಂಡು ಸರ್ವೆ ಇಲಾಖೆಗೆ ಅರ್ಜಿ ಕೊಟ್ಟು ನಮ್ಮ ಹೆಸರಿಗೆ ಪೋಡು ಮಾಡಿಸಿಕೊಂಡಿದ್ದೇವೆಂದರೆ ಸರಿಯಲ್ಲ. ಹುಚ್ಚೇಗೌಡರ ಹೆಸರಿನಲ್ಲಿದ್ದ ಕ್ರಯಪತ್ರವನ್ನು ನಾನು ಪರಿಶೀಲಿಸಿಲ್ಲ. ದಾವಾ ಸರ್ವೆ ನಂಬರ ನಲ್ಲಿ ನಿಮಗೆ ಯಾವುದೇ ಹಕ್ಕು ಇಲ್ಲ, ಸರ್ವೆ ಇಲಾಖೆಯೊಂದಿಗೆ ಸಾಮಿಲಾಗಿ ಸುಳ್ಳು ದಾಖಲೆ ಬರೆಸಿ,ಕೊಂಡಿದ್ದೇವೆಂದರೆ ಸರಿಯಲ್ಲ. ಕಂದಾಯ ಇಲಾಖೆಗೆ ಅರ್ಜಿ ಕೊಟ್ಟು ನಮ್ಮ ಹೆಸರಿಗೆ 11 ಗುಂಟೆಗೆ ಸುಳ್ಳು ಖಾತೆ ಮಾಡಿಸಿಕೊಂಡಿದ್ದೇವೇರಂದರೆ ಸರಿಯಲ್ಲ. ಮಾಯಣ್ಣರವರಿಗೆ ಕ್ರಯಪತ್ರ ಬರೆದುಕೊಡುವ ಅಧಿಕಾರ ಇರಲಿಲ್ಲ ಎಂದರೆ ಸರಿಯಲ್ಲ.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

**(ಲೋಕೇಶ)**
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ರಾಮನಗರ.